<u>ದಿನಾಂಕಃ 15-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .</u>

<u>ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ.ಕೆ.ಎನ್.ಡಿ ವಕೀಲರಿಂದಃ</u>

ನನ್ನ ತಂದೆ ಹೊಳಿಯಪ್ಪಗೌಡ ರವರಿಗೆ 4 ಜನ ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತೇವೆ. ನನ್ನ ತಂದೆ ಜೀವಂತವಿದ್ದಾಗ ದಿಃ 01-07-1992 ರಂದು ತನ್ನ ಇಬ್ಬರು ಗಂಡು ಮಕ್ಕಳಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳನ್ನು ಹಿಸ್ಸೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗ 4 ಜನ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಆಗ ಯಾವುದೇ ಹಕ್ಕು ಇರಲಿಲ್ಲ ಈ ಕಾಯ್ದೆ ಬದಲಾಗಿರುವುದರಿಂದ ನಮಗೂ ಸಹ ಹಕ್ಕು ಇರುತ್ತದೆ ಎಂದು ಹೇಳುತ್ತಾರೆ. 1992 ರಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇರದ ಕಾರಣ ಗಂಡು ಮಕ್ಕಳಿಗೆ ಮಾತ್ರ ಆಸ್ತಿಯನ್ನು ವಿಭಾಗಿಸಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲಿಯವರೆಗೂ ಯಾವುದೇ ವಿಭಾಗವಾಗಿರುವುದಿಲ್ಲ ನಮ್ಮದು ಕೂಡು ಕುಟುಂಬ ಎಂದು ಹೇಳುತ್ತಾರೆ. 1992 ರಲ್ಲಿ ಆದ ಹಿಸ್ಸೆದ ಪ್ರಕಾರ ಡ.ನಂ.3346 ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಆ ಹಿಸ್ಸೆದ ಪ್ರಕಾರ ಹನುಮಂತಪ್ಪಗೌಡ ರವರಿಗೆ ಕೂನಬೇವು ಗ್ರಾಮದ ಸರ್ವೆ ನಂ.31/1 ರಲ್ಲಿ 7 ಎಕರೆ 16 ಗುಂಟೆ , 73/2 ರಲ್ಲಿ 4 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಅಲ್ಲಿಂದ ಇಲ್ಲಿಯವರೆಗೂ ಸದರಿ ಜಮೀನು ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಅವರೇ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.31/1 ರಲ್ಲಿ 3 ಎಕರೆ 18 ಗುಂಟೆ ದಕ್ಷಿಣ ಭಾಗ , ಸರ್ವೆ ನಂ.32/2+3 ಎ ರಲ್ಲಿ 3 ಎಕರೆ 39 ಗಂಟೆ ಹಾಗೂ ಸರ್ವೆ ನಂ.73/1 ರಲ್ಲಿ 4 ಎಕರೆ 13 ಗುಂಟೆ ಆಸ್ತಿ ಗುಡ್ಡನಗೌಡ ಮತ್ತು ರೇಣುಕಾ ಪಾಟೀಲ ರವರ ಸಾಮೂಹಿಕ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಅವರು ಇರುವವರೆಗೂ ಅವರೇ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಗುಡ್ಡನಗೌಡ ಸತ್ತ ನಂತರ ಅವರ ಮಗ 10 ನೇ ಪ್ರತಿವಾದಿಯವರು ಸದರಿ ಆಸ್ತಿಗಳನ್ನು ವಹಿವಾಟು ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. 10 ನೇ ಪ್ರತಿವಾದಿಯವರು ತಮ್ಮ ಮನೆತನದ ಅಡಚಣೆ ಸಲುವಾಗಿ ಬ್ಯಾಂಕ್ ವ ಸೊಸೈಟಿಗಳ ಸಾಲ ತಿರುವಳಿಗಾಗಿ ದಿಃ 09-09-2022 ರಂದು ಸರ್ವೆ ನಂ.73/1 ರಲ್ಲಿ 4 ಎಕರೆ 13 ಗುಂಟೆ ಆಸ್ತಿಯನ್ನು 11 ಲಕ್ಷ ರೂಪಾಯಿಗೆ 12 ನೇ ಪ್ರತಿವಾದಿಯವರಿಗೆ ಮಾರಾಟ

ಮಾಡಿರುತ್ತಾರೆ ಎಂದರೆ ಸರಿ. ಅಂದಿನಿಂದ 12 ನೇ ಪ್ರತಿವಾದಿಯವರೇ ವಹಿವಾಟು ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 12 ನೇ ಪ್ರತಿವಾದಿಯವರು ಸದರಿ ಆಸ್ತಿಯನ್ನು ಖರೀದಿ ಮಾಡುವಾಗ ಡ.ನಂ.3346 ನ್ನು ಪರಿಶೀಲನೆ ಮಾಡಿ ಆಸ್ತಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ದಾಖಲೆಗಳೆಲ್ಲಾ ಸುಳ್ಳು ಇರುತ್ತವೆ ಎಂದು ಹೇಳುತ್ತಾರೆ. ದಿಃ 01-07-1992 ರಂದು ನನ್ನ ತಂದೆ ಹೊಳಿಯಪ್ಪಗೌಡ ಮತ್ತು ಇಬ್ಬರು ಗಂಡು ಮಕ್ಕಳ ನಡುವೆ ಪಾಲು ವಿಭಾಗವಾಗಿರುವುದರಿಂದ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ 10 ನೇ ಪ್ರತಿವಾದಿಯವರು 12 ನೇ ಪ್ರತಿವಾದಿಯವರ ಪರವಾಗಿ ಮಾಡಿಕೊಟ್ಟ ಕ್ರಯ ಪತ್ರವನ್ನು ಪ್ರಶ್ನೆ ಮಾಡುವ ಯಾವುದೇ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 10 ಮತ್ತು 11 ನೇ ಪ್ರತಿವಾದಿಗಳ ಪರ ವಕೀಲರು 12 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಗಿದೆ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.